ವಿಶಾಖ ಎನ್

# ಹೊಸ ಪ್ರತಿಭೆಗಳಿಗೆ ಪ್ರಿಯಾಂಕಾ ನೀರು

ಪ್ರಿಯಾಂಕಾ ಚೋಪ್ರಾ ತಾವು ನಿರ್ಮಾಣಕ್ಕೆ ಇಳಿದಿದ್ದು ಯಾಕೆ ಎಂದು ಇತ್ತೀಚೆಗೆ ಮನಬಿಚ್ಚಿದರು. ಹಿಂದಿ ಚಿತ್ರರಂಗದ ಯಾರೊಬ್ಬರ ಪರಿಚಯವೂ ಇಲ್ಲದೆ ಇದ್ದ ಕಾಲದಲ್ಲಿ ತಾವು ನಟಿಯಾಗಿ ಏಗಿದ ದಿನಗಳೇ ಅವರಿಗೆ ನಿರ್ಮಾಪಕಿಯಾಗಲು ಸ್ಫೂರ್ತಿಯಂತೆ.

'ದಿ ಪರ್ಪಲ್ ಪೆಬ್ಬಲ್ ಪ್ರೊಡಕ್ಷನ್ಸ್' ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿ, ಹಲವು ವರ್ಷಗಳಿಂದ ಅವರು ಸಿನಿಮಾಗಳನ್ನು ನಿರ್ಮಿಸುತ್ತಾ ಬಂದಿದ್ದಾರೆ. ಈಗ ಅವರ ನಿರ್ಮಾಣದ 'ಬಾರ್ನ್ ಹಂಗ್ರಿ' ಎಂಬ ಚಿತ್ರವು ಜಿಯೊ ಹಾಟ್ ಸ್ಟಾರ್ ವೇದಿಕೆಯಲ್ಲಿ ಪ್ರಸಾರವಾಗುತ್ತಿದೆ.

'ಚಿತ್ರರಂಗಕ್ಕೆ ನಾನು ಪ್ರವೇಶಿಸಿದ ದಿನಗಳಲ್ಲಿ ನಿರ್ದಿಷ್ಟವಾದ ಅಭಿಪ್ರಾಯ ಮಂಡಿಸುವುದೇ ಕಷ್ಟವಿತ್ತು. ಬರುತ್ತಿದ್ದ ಅವಕಾಶಗಳಲ್ಲಿ ಕೆಲವನ್ನು ಒಪ್ಪಿಕೊಂಡು ಮುಂದೆ ಸಾಗುವ ಜರೂರು. ತಂದೆ ಹಾಗೂ ತಾಯಿಗೆ ವೈದ್ಯಕೀಯ ವೃತ್ತಿಯ ಪರಿಚಯವಿತ್ತೇ ವಿನಾ ಬಣ್ಣದ ಲೋಕದ ಅರಿವು ಇರಲಿಲ್ಲ. ಅವರು ನನಗೆ ಏನೂ ಸಮಸ್ಯೆ ಆಗದೆ ಇರಲಿ ಎಂದು ಆಶಿಸಬಲ್ಲವರಾಗಿದ್ದರು. ನನಗೆ ಸರಿಯಾಗಿ ಮಾರ್ಗದರ್ಶನ ಮಾಡುವವರು ಇರಲಿಲ್ಲ. ಒತ್ತಡದಲ್ಲಿ ಕೆಲವು ತಪ್ಪು ಹೆಜ್ಜೆಗಳನ್ನು ಅನೇಕರು ಇಡುವಂತಹ ಒತ್ತಡವಂತೂ ಉದ್ಯಮದಲ್ಲಿ ಇದೆ. ಆಗ ಎಷ್ಟೋ ಪ್ರತಿಭಾವಂತರು ಅವಕಾಶಕ್ಕಾಗಿ ಚಾತಕಪಕ್ಷಿಗಳಂತೆ ಕಾಯುತ್ತಾ ಇರುವುದನ್ನು ನಾನು ಕಂಡಿದ್ದೆ. ಈಗ ಹೊಸಬರ ಸೃಜನಶೀಲತೆ ನನ್ನನ್ನು ಸೆಳೆಯುವುದು ಅದೇ ಕಾರಣಕ್ಕೆ ಎನಿಸುತ್ತದೆ. ಒಳ್ಳೊಳ್ಳೆಯ ಚಿತ್ರಗಳನ್ನು ನಿರ್ಮಿಸುವ ಮೂಲಕ ನಾನು ಕಳೆದುಕೊಂಡಿದ್ದನ್ನು ಬೇರೆಯವರಿಗೆ ಸಿಗುವಂತೆ ಮಾಡುವ ಹೆಬ್ಬಯಕೆ ಇದೆ. ಅದೊಂದು ರೀತಿ ಸುಖ ನೀಡುವ ಕೆಲಸ' ಎಂದು ಪ್ರಿಯಾಂಕಾ ಸಾರ್ಥಕ ನಗು ತುಳುಕಿಸುತ್ತಾರೆ.





# ಹೇಮಾಮಾಲಿನಿ

## ವೃತ್ತಿ ಬದುಕು ದಿಕ್ಕು ತಪ್ಪಿದ್ದಾಗ...

ಧರ್ಮೇಂದ್ರ ಇತ್ತೀಚೆಗೆ ಅಗಲಿದರು. ಅವರ ಎರಡನೇ ಪತ್ನಿ ಹೇಮಾಮಾಲಿನಿ ಬದುಕಿನ ಕಷ್ಟದ ಅಧ್ಯಾಯವೊಂದು ಅನಂತರ ಮತ್ತೆ ಬೆಳಕಿಗೆ ಬಂದಿತು. ಅದು ಒಂದು ಸಿನಿಮಾಗೆ ವಸ್ತು ಆಗುವಷ್ಟು ಗಟ್ಟಿಯಾಗಿದೆ. ಸಾಮಾನ್ಯವಾಗಿ ಈಗಿನ ತಾರಾಜೋಡಿಗಳನ್ನು ನೋಡಿದಾಗ, ಅವರೆಲ್ಲರೂ ಆರ್ಥಿಕವಾಗಿ ಸಮೃದ್ಧರಾಗಿ ಇರುತ್ತಾರೆ ಎಂದೇ ಭಾವಿಸುತ್ತೇವೆ. ಆದರೆ, ಹೇಮಾಮಾಲಿನಿ ಬದುಕು ಹಾಗೆ ಇರಲಿಲ್ಲ. ಅವರಿಗೆ ತಾರಾ ವರ್ಚಸ್ಸು ಇದ್ದಾಗ ಕೈಲಿ ಹಣ ಆಡುತ್ತಿತ್ತು ಎನ್ನುವುದೇನೋ ನಿಜ. ಅವರ ತಾಯಿಗೆ ಆರ್ಥಿಕ ಶಿಸ್ತು ಇರಲಿಲ್ಲ. ವರ್ಷಗಟ್ಟಲೆ ಅವರು ತೆರಿಗೆಯನ್ನೇ ಕಟ್ಟಿರಲಿಲ್ಲ. ಹೇಮಾಮಾಲಿನಿ ತಂದೆ ಪದೇ ಪದೇ ನೆನಪಿಸಿದರೂ ಮಗಳು ಕಷ್ಟಪಟ್ಟು ಸಂಪಾದಿಸಿದ ಹಣದಲ್ಲಿ ತೆರಿಗೆಯ ಪಾಲನ್ನು ಯಾಕೆ ಕಟ್ಟಬೇಕು ಎಂದು ಅವರು ಮುಗ್ಧತೆಯಿಂದ ಉಡಾಫೆ ಮಾಡಿದ್ದರು. ಮುಂದೆ ಅದೇ ಹೇಮಾಮಾಲಿನಿ ಅವರಿಗೆ ಮುಳುವಾಯಿತು. ಮಾಡಿದ್ದ ಸಾಲ, ಕಟ್ಟಬೇಕಿದ್ದ ತೆರಿಗೆ ಬಾಕಿ ಎಲ್ಲವೂ ಸೇರಿ ಅವರಿಗೆ ದೊಡ್ಡ ಆರ್ಥಿಕ ಹೊರೆ ಕಾಡಲು ಆರಂಭಿಸಿತು. ಧರ್ಮೇಂದ್ರ ಅವರನ್ನು ಮದುವೆಯಾದ ಮೇಲೆ ಮೊದಲಿನಷ್ಟು ಸಿನಿಮಾ ಅವಕಾಶಗಳು ಸಿಗಲಿಲ್ಲ. ಇಶಾ ಹಾಗೂ ಅಹಾನಾ ಹುಟ್ಟಿದ ಮೇಲೆ ವೈಯಕ್ತಿಕ ಖರ್ಚು ಕೂಡ ಹೆಚ್ಚಾಗಿತ್ತು. ಧರ್ಮೇಂದ್ರ ನೆರವು ಕೊಡಲು ಸಿದ್ಧರಿದ್ದರು. ಆದರೆ, ಅಗತ್ಯ ಇದ್ದ ಮೊತ್ತ ದೊಡ್ಡದಿತ್ತು. ಹಾಗಾಗಿ ತಾವೇ ದುಡಿಯಲು ಮುಂದಾದರು.

'ದುರ್ಗಾ', 'ಅಂಜಾಮ್', 'ಸೀತಾಪುರ್ ಕಿ ಗೀತಾ', 'ಜಮಾಯಿ ರಾಜಾ' ರೀತಿಯ ಬಿ ಗ್ರೇಡ್ ಚಿತ್ರಗಳಿಗೂ ಹೇಮಾಮಾಲಿನಿ ಬಣ್ಣ ಹಚ್ಚಿದರು. ಮಗಳು ಇಶಾ ದೊಡ್ಡವಳಾದ ಮೇಲೆ ಈ ಸಿನಿಮಾಗಳನ್ನು ವೀಕ್ಷಿಸಿದರು. ಇಂತಹ ಚಿತ್ರಗಳಲ್ಲಿ ನಟಿಸಿದ್ದು ಯಾಕೆ ಎಂಬ ಪ್ರಶ್ನೆಯನ್ನು ನೇರವಾಗಿ ತಾಯಿಯಲ್ಲಿ ಕೇಳಿದರು. ಆಗ ಹೇಮಾಮಾಲಿನಿ ತಾವು ಇದ್ದ ಕಷ್ಟದ ಪರಿಸ್ಥಿತಿಯನ್ನು ಬಣ್ಣಿಸಿದ್ದರು. ಮಗಳಿಗೆ ಆಗ ತಾಯಿಯ ಬದುಕಿನ ಪಡಿಪಾಟಲು ಅರ್ಥವಾಗಿತ್ತು.

'ತುಮ್ ಹಸೀನ್ ಮೈ ಜವಾನ್', 'ಸೀತಾ ಔರ್ ಗೀತಾ', 'ಶೋಲೆ', 'ಜುಗ್ನೂ', 'ಡ್ರೀಮ್ ಗರ್ಲ್' ಸಿನಿಮಾಗಳಲ್ಲಿ ಧರ್ಮೇಂದ್ರ ಅವರಿಗೆ ಜೋಡಿಯಾಗಿ ಹೇಮಾ ಪ್ರಭಾವಳಿಯೊಂದನ್ನು ದಕ್ಕಿಸಿಕೊಂಡಿದ್ದರು. ಆಮೇಲೆ ಅದು ದಿಢೀರನೆ ಕಳಚಿ ಬಿದ್ದಾಗ ಅವರು ನಟನೆ ಅಷ್ಟೇ ಅಲ್ಲದೆ ಆಹ್ವಾನ ಸಿಗುತ್ತಿದ್ದ ಕಾರ್ಯಕ್ರಮಗಳಿಗೆ ಹೋಗಿ ನೃತ್ಯ ಮಾಡುವುದಕ್ಕೂ ನಿರಾಕರಿಸುತ್ತಿರಲಿಲ್ಲ. ಹೇಗೋ ಒಂದಿಷ್ಟು ಹಣ ಹೊಂದಿಸಿ, ಇಬ್ಬರೂ ಹೆಣ್ಣುಮಕ್ಕಳನ್ನು ಹಸನಾಗಿ ಬೆಳೆಸಬೇಕು ಎನ್ನುವುದಷ್ಟೇ ಅವರ ಬದುಕಿನ ಪರಮ ಗುರಿಯಾಗಿತ್ತು.